ಶ್ರೀ ಕೆ. ಪ್ರಭಾಕರ್.—ತಿಗ್ಗಾಂವನಲ್ಲಿ. ಸವನೂರಲ್ಲಿ ೨೭ ಹಳ್ಳಿಗಳು ೩ ಹ್ಯಾಂಲೆಟ್ಸ್ ಸಂಬಂಧ ಪಟ್ಟಂತೆ ಬಾವಿಗಳನ್ನು ತೆಗೆಯಲಾಗಿದೆ.

ಶ್ರೀ ಎಂ. ಎಂ. ನದಾಫ್.—ನೀವು ತೆಗೆದಿರುವ ಬಾವಿಗಳಲ್ಲಿ ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿವೆ ?

ಶ್ರೀ ಕೆ. ಪ್ರಭಾಕರ್.—೬ ಬಾವಿಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲ ? ಉಳಿದವೆಲ್ಲಾ ಚೆನ್ನಾಗಿ ಕೆಲಸ ಮಾಡುತ್ತಿವೆ.

ಶ್ರೀ ಎಂ. ಎಂ ನದಾಫ್.—ಸ್ವಾಮಿ, ಅರ್ಧಕ್ಕೆ ಅರ್ಧ ಬಾವಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಚಿಂದಾಪುರ ಮತ್ತು ಸಿಡ್ಲಾಪುರ ಗ್ರಾಮದಲ್ಲಿ ಮೂರು ಬಾರಿ ರಿಪೇರಿ ಮಾಡಲಾಗಿದೆ. ಬಾವಿಗಳಲ್ಲಿ ನೀರು ಕೂಡ ಇಲ್ಲ, ಸಿಡ್ಲಾಪುರ ಗ್ರಾಮದಲ್ಲಿ ೪೧೦ ಜನ ಇದ್ದಾರೆ. ೧೨೦ ಗ್ಯಾಲನ್ ನೀರು ಬರುತ್ತೆ ಎಂದು ನೀವು ಹೇಳಿದರೂ ಕೂಡ, ಒಬ್ಬೊಬ್ಬರಿಗೆ ಒಂದೊಂದು ಗ್ಯಾಲನ್ ನೀರು ಸಿಗುತ್ತಿಲ್ಲ. ಇನ್ನು ಹೆಚ್ಚಿಗೆ ನೀರು ಸಿಗುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಮಾಡಿಕೊಡುತ್ತೇವೆ.

Transfer of land at Tadavalga village, Indi Taluka. Bijapur district.

406. Sri S. S. Arakeri (Balloli).—Will the Minister for Education be pleased to state:—

(*a*) whether it is a fact that 2 acres of land in M. Block No. 816 of Tadavalaga village Indi Taluk in Bijapur district which belongs to Government Kannada boys school has been retransferred from the possession of school to one Sri C. M. Hugar ;

(*b*) if so, whether the assistant educational officer, Bijapur has taken the consent of the betterment Committee of the said school?

(*c*) the reason why the land has been transferred ?

Sri B. Subbayya Shetty (Minister for Education).—

(*a*) Yes on exchange basis.

(*b*) No.

(*c*) The land obtained in exchange is 3 acres *i.e.*, 1 acre more than the land given back and is more suitable and beneficial to the school.

ಶ್ರೀ ಎಸ್. ಎಸ್. ಅರಕೇರಿ.—ಸ್ವಾಮಿ, ಇಂಡಿ ತಾಲ್ಲೂಕಿನ ತದವಲಗ ಗ್ರಾಮದ ಸರ್ಕಾರೀ ಕನ್ನಡ ಬಾಲಕರ ಶಾಲೆಗೆ ಸೇರಿದ ೮೧೬ನೇ ಸರ್ವೆ ನಂಬರಿಗೆ ಸಂಬಂಧಪಟ್ಟಂತೆ ೨ ಎಕರೆ ಜಮೀನನ್ನು ಶಾಲೆಯ ವಶದಿಂದ ಶ್ರೀ ಸಿ. ಎಂ. ಹೂಗಾರ್ ಎಂಬುವರಿಗೆ ಪುನರ್ ಪರ್ಗಾಯಿಸಿರುವುದು ನಿಜವೆ ? ಹಾಗಿದ್ದರೆ ಸ್ಕೂಲಿನ ಬೆಟರ್‌ಮೆಂಟ್ ಕಮಿಟಿಯಲ್ಲಿ ಇದರ ಬಗ್ಗೆ ವಿಚಾರ ವಿನಿಮಯ ಏತಕ್ಕೆ ಮಾಡಲಿಲ್ಲ ತಿಳಿಸಬೇಕು.

† ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಶ್ರೀ ಸಿ. ಎಂ, ಹೂಗಾರ್ ಎಂಬುವವರಿಗೆ ಪುನರ್ ವರ್ಗಾಯಿಸಿರುವ ಎರಡು ಎಕರೆ ಜಾಗ ಸ್ಕೂಲು ಸೈಟಿಗೆ ಅಡ್ಜಸೆಂಟ್ ಆಗಿರಲಿಲ್ಲ, ಸ್ವಲ್ಪ ದೂರವಾಗಿದೆ ಎಂದು ತಿಳಿದು ಬಂದಿದೆ. ನಂತರ ಈ ಸ್ಕೂಲಿಗೆ ಅಡ್ಜಸೆಂಟ್ ಆಗಿರುವ ಮೂರು ಎಕರೆ ಜಮೀನನ್ನು ಆ ಎರಡು ಎಕರೆ ಬದಲು ಕೊಡುತ್ತಾರೆಂದು ತಿಳಿದು ಬಂದಿದ್ದು, ಡೆಪ್ಯುಟಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ ಸ್ಟ್ರಕ್ಷನ್ ಅವರು ಕೂಡ ಇದೇ ಒಪಿನಿಯನ್ ಕೊಟ್ಟಿದ್ದಾರೆ. ಈ ಮೂರು ಎಕರೆ ಜಮೀನು ಸ್ಕೂಲಿಗೆ ಅಡ್ಜಸೆಂಟ್ ಆಗಿದ್ದು, ಪ್ಲೇ ಗ್ರೌಂಡ್ಸಿಗೆ ಅನುಕೂಲವಾಗಿರುವುದರಿಂದ ಇದರ ಎಕ್ಸ್‌ಚೇಂಜ್‌ಗಾಗಿ ಆ ಎರಡು ಎಕರೆ ಜಮೀನನ್ನು ಕೊಟ್ಟಿದೆ. ಅವರು ಆ ಎರಡು ಜಕರೆ ಜಮೀನಿಗೆ ಬದಲಾಗಿ ಮೂರು ಎಕರೆ ಜಮೀನನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ.

ಶ್ರೀ ಎಸ್. ಎಸ್. ಆರಕೇರಿ.—ಈ ವಿಚಾರದ ಬಗ್ಗೆ ಯಾವ ಉದ್ದೇಶದಿಂದ ಬೆಟರ್‌ಮೆಂಟ್ ಸದಸ್ಯರ ಕೂಡ ಚರ್ಚೆ ಮಾಡಲಿಲ್ಲ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ —ಚರ್ಚೆ ಮಾಡಿದ್ದಾರೆ, ಅಥವಾ ಮಾಡಿಲ್ಲ ಎನ್ನುವುದು ಗೊತ್ತಿಲ್ಲ. ಇದರಿಂದ ಸ್ಕೂಲಿಗೆ ಏನಾದರೂ ಅನ್ಯಾಯವಾಗಿದ್ದರೆ, ಅದನ್ನು ತಿಳಿಸಿದರೆ ನಾನು ಕೂಲಂಕುಷವಾಗಿ ವಿಚಾರಿಸುತ್ತೇನೆ.

ಶ್ರೀ ಎಸ್. ಎಸ್. ಆರಕೇರಿ.—ಈಗ ಎರಡು ಎಕರೆ ಜಮೀನು ವರ್ಗಾವಣೆ ಮಾಡಿರುವುದರಿಂದ ಅನ್ಯಾಯವಾಗಿದೆ ಎನ್ನುವ ದೃಷ್ಟಿಯಿಂದಲೇ ನಾನು ಪ್ರಶ್ನೆ ಕೇಳಿದ್ದೇನೆ. The land has been retransferred to Sri C. M. Hugar by keeping the Betterment Committee members in darkness. The A.E.O. was also not consulted in the matter. This matter was not discussed with the hon. members of the Betterment Committee. May I know the reason why these members were kept in darkness, and without their consent how the land was transferred to Sri C. M. Hugar ?

SRI B. SUBBAIAH SHETTY.—It is not a question whether technicalities or such other things were observed. According to the information I have gathered, 2 acres of land itself was given by the same gentleman to the Government and it later on it was found that these 2 acres of land was not adjacent to the school site. So, he offered to change the land and gave 3 acres instead of 2 acres. It is only an exchange that was made. According to the information of the Department, the 3 acres of land which is given is far suitable for a playground. This is the information which I have. The question, whether one is put in darkness or not does not arise. The Deputy Director of Public Instruction, who was also consulted said that the land was suitable. That is why the Department gave consent for exchange.

ಶ್ರೀ ಎಸ್. ಎಸ್. ಆರಕೇರಿ.—ಸ್ವಾಮಿ, ಈ ಬೆಟರ್‌ಮೆಂಟ್ ಕಮಿಟಿ ಸದಸ್ಯರು ಏನು ಇದ್ದಾರೆ ಇವರು ಸ್ಕೂಲಿನ ಏಳಿಗೆಗಾಗಿ, ಅದರ ಹಿತಚಿಂತನೆಗಾಗಿ ಇರುತ್ತಾರೆಯೇ ಹೊರತು ಬೇರೆ ಉದ್ದೇಶದಿಂದ ಇರುವುದಿಲ್ಲ. ಇಂತಹ ಹಿತಚಿಂತಕರನ್ನು ದೂರ ಇಟ್ಟು ಎ.ಇ.ಓ. ಏನಿದ್ದಾರೆ ಇವರು ಕೆಲಸ ಮಾಡಿರುವುದರಿಂದ ಈ ಜಮೀನು ಎಕ್ಸ್‌ಚೇಂಜ್ ಮಾಡುವಲ್ಲಿ ದುರ್ವ್ಯವಹಾರ ನಡೆದಿದೆ. They were kept under darkness before exchanging this land. ಈ ರೀತಿ ನಡೆದಿರುವುದರಿಂದ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ಎನ್ನುವುದನ್ನು ತಮ್ಮ ಉತ್ತರದಲ್ಲಿ ತಿಳಿಸಬೇಕು.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಈ ವಿಚಾರದಲ್ಲಿ ದುರ್ವ್ಯವಹಾರ ನಡೆದಿದೆ ಎನ್ನುವುದು ಕಂಡು ಬರುವುದಿಲ್ಲ. I agree that in such cases the Betterment Committee also could be consulted.

N.R.W.S. Schemes in Holenarasipur Taluk

69. SRI H. D. DEVEGOWDA (Holenarasipur).—Will the Minister for Rural Development and Panchayat Raj pleased to state:

(*a*) when the N.R.W.S. Scheme was completed in Malali and Arekennemadi, Doddakuncha and Keregodu villages in Holenarasipur Taluk;

(*b*) the number of days these schemes have functioned (Schemes with information be furnished);

(*c*) the reasons for failure of these schemes;

(*d*) whether Government purpose to take early steps to get these schemes put to use at an early date to benefit the general public?

SRI K. PRABHAKAR (Minister for Rural Development and P. Raj).-

		Completed during
	(*a*)—	
1.	Malali	April 1975.
2.	Anekannam badi	February 1976.
3.	Keregodu	November 1977.
4.	Doddakuncha	December 1975.
	(*b*)	
1.	Malali	For about a year
2.	Anekannambadi	do
3.	Keregodu	This scheme could not be commissioned for want of electrical connection to the water supply installation.
4.	Doddakuncha	For a year.
	(*c*)	
1.	Malali	This scheme did not function for nearly a year for want of repairs to the pumpsets.